# ಪಾಪುವಿನ ಆಸೆ

■ ವೀಣಾ ಅಶೋಕ ಜೋಶಿ, ಅಂಕೋಲಾ
ಕಲೆ: ಸಂತೋಷ್ ಸಸಿಹಿತ್ಲು

ಹಗಲಲ್ಯಾಕೆ ಕಾಣ್ಸೋದಿಲ್ಲ
ಬೆಳ್ಳಿ ಚಂದಿರ
ಅವನಿಲ್ದೇನೆ ಖಾಲಿ ಖಾಲಿ
ನೀಲಿ ಅಂಬರ

ಮೊಬೈಲ್ ತೋರ್ಸಿ ಏಮಾರಿಸ್ತಿ
ಸುಖಾಸುಮ್ಮನೆ
ಅದರ ಬದ್ಲು ಫೋನ್ ಮಾಡಿ
ಕರೆ ಅವನನ್ನೆ

ನಾನು ಚಂದ್ರ ಅಂಗಳದಲ್ಲೇ
ಆಟ ಆಡ್ತೀವಿ
ಹಸಿವಾಗುತ್ಲೆ ಅನ್ನ ಸಾರು
ಕಲ್ಸಿ ತಿನ್ತೀವಿ

ಅಪ್ಪ ತಂದ ಬಣ್ಣದ ವಾಚು
ಅವ್ನೀಗ್ ಕಟ್ತೀನಿ
ಆಡೋ ಸಮಯಕ್ ಇಳ್ದು ಬರ್ಲು

ನಾನೇ ಹೇಳ್ತೀನಿ
ತಂಪೊತ್ನಲ್ಲಿ ಆಡೋದೊಳಿತು
ಅಜ್ಜಿ ಹೇಳ್ದಂಗೆ
ಸೂರ್ಯನ ಬದ್ಲು ಚಂದ್ರ ಬರ್ಲಿ
ಹೇಳು ಅವಂಗೆ ■







ಶ್ರದ್ಧಾ ಎಸ್.
ಆರ್‌ಎನ್‌ಎಸ್
ವಿದ್ಯಾನಿಕೇತನ್
ಸ್ಕೂಲ್, ತಾವರೆಕೆರೆ,
ಬೆಂಗಳೂರು



ಸಿಂಚನಾ ಕೆ. ಭಟ್
4ನೇ ತರಗತಿ, ವಿಠ್ಠಲ
ಜೇಸೀಸ್ ಇಂಗ್ಲಿಷ್
ಮೀಡಿಯಂ ಹೈಸ್ಕೂಲ್
ವಿಟ್ಲ, ಬಂಟ್ವಾಳ ತಾಲ್ಲೂಕು



ಮೋಕ್ಷ
ದೇಶಪಾಂಡೆ
2ನೇ ತರಗತಿ,
ಕೆಎಲ್‌ಇ ಸ್ಕೂಲ್
ನಾಗರಬಾವಿ,
ಬೆಂಗಳೂರು



## ಕುಂಚ ಪ್ರಪಂಚ



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: editorsu@sudha.co.in